1	2	3	4	5
8.	ಪ್ರಸಾದ್ ಗಬ್ಬೂರ್	8	ಎಸ್.ಬಿ. ರೆಸಿಡೆನ್ಸಿಯಲ್ ಕಾಂಪೋಸಿಟ್ ಕಾಲೇಜ್, ಗುಲ್ಬರ್ಗಾ,	ಗುಲ್ಬರ್ಗಾ.
9.	ಶರತ್. ಬಿ.ಎಸ್.	9	ಎಂ.ಇ.ಎಸ್. ಕಾಲೇಜ್, ಮಲ್ಲೇಶ್ವರಂ, ಬೆಂಗಳೂರು.	ಬೆಂಗಳೂರು.
10.	ವಿಶ್ವನಾಥ್	10	ಎಸ್.ಎಂ.ಎಸ್. ಕಾಲೇಜ್, ಬ್ರಹ್ಮಾವರ್, ಉಡುಪಿ ತಾಲ್ಲೂಕು.	ದಕ್ಷಿಣ ಕನ್ನಡ.

ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ತೆಗೆದುಕೊಂಡ ಕ್ರಮಗಳು

2899 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಪರಿಹಾರಕ್ಕೆ ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು?

ಆ) ಯಾವ ಯಾವ ಯೋಜನೆಗಳ ಮೂಲಕ ಈ ಸಮಸ್ಯೆಯನ್ನು ನಿವಾರಿಸಲಾಗುತ್ತಿದೆ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು) :

ಅ) ರಾಜ್ಯದ ಗ್ರಾಮೀಣ ಜನವಸತಿಗಳ ಜನಸಂಖ್ಯೆ ಮತ್ತು ಅಲ್ಲಿಯ ಕುಡಿಯುವ ನೀರಿನ ಸಮಸ್ಯೆಗಳನ್ನಾಧರಿಸಿ ಪ್ರತಿವರ್ಷವೂ ನಿಯಮಾವಳಿಗಳ ಪ್ರಕಾರ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ಮೂಲತ: ಈ ಕಾರ್ಯಕ್ರಮವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನಗಳಡಿ ಅನುಷ್ಠಾನಗೊಳಿಸಲಾಗುತ್ತಿದೆ. ಅಲ್ಲದೆ, ದ್ವಿಪಕ್ಷೀಯ ನೆರವಿನ ವಿಶ್ವಬ್ಯಾಂಕ್, ಡ್ಯಾನಿಡಾ ಮತ್ತು ನೆದರ್‌ಲ್ಯಾಂಡ್ ಸರ್ಕಾರಗಳ ಯೋಜನೆಗಳಡಿ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಕಡಿಮೆ ಮಳೆ ಅಥವಾ ಮಳೆಯ ಅಭಾವದಿಂದಾಗಿ ಕುಡಿಯುವ ನೀರಿನ ತೀವ್ರ ತೊಂದರೆಯುಂಟಾಗುವ ಜನವಸತಿಗಳ ಸಮಸ್ಯೆ ಪರಿಹಾರಕ್ಕಾಗಿ ಅಭಾವ ಪರಿಹಾರ ಕಾರ್ಯಕ್ರಮದಡಿ ರಾಜ್ಯ ಸರ್ಕಾರದಿಂದ ಅವಶ್ಯಕ ಹಣವನ್ನು ಒದಗಿಸಲಾಗುತ್ತದೆ.

ಆ) ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಜನಸಂಖ್ಯೆಯ ಆಧಾರದ ಮೇಲೆ ಮುಖ್ಯವಾಗಿ 1) ಕೈಪಂಪು ಕೊಳವೆಬಾವಿ 2) ಕಿರುನೀರು ಸರಬರಾಜು ಮತ್ತು 3) ಕೊಳವೆ ನೀರು ಸರಬರಾಜು ಯೋಜನೆಗಳ ಮೂಲಕ ನಿವಾರಿಸಲಾಗುತ್ತದೆ. ಅಲ್ಲದೆ ಅವಶ್ಯಕತೆಯನುಸಾರ ತೆರೆದಬಾವಿ ಇತ್ಯಾದಿಗಳ ಮುಖಾಂತರವೂ ನೀರು ಸರಬರಾಜಿನ ವ್ಯವಸ್ಥೆ

ಮಾಡಲಾಗುತ್ತದೆ. ಜೂನ್-97ರ ಅಂತ್ಯಕ್ಕೆ ರಾಜ್ಯದಲ್ಲಿ ಒಟ್ಟು ಪೂರ್ಣಗೊಳಿಸಲಾದ ಕುಡಿಯುವ ನೀರಿನ ಯೋಜನೆಗಳ ವಿವರಗಳ ಈ ಕೆಳಗಿನಂತಿವೆ.

1) ಕೈಪಂಪು ಕೊಳವೆ ಬಾವಿಗಳು - 151251
2) ಕಿರುನೀರು ಸರಬರಾಜು ಯೋಜನೆಗಳು - 11367
3) ಕೊಳವೆನೀರು ಸರಬರಾಜು ಯೋಜನೆಗಳು - 10838

ಗ್ರಾಮೀಣ ಪ್ರದೇಶದಲ್ಲಿ ಗ್ರಂಥಾಲಯಗಳ ಸ್ಥಾಪನೆ

2901 - ಶ್ರೀ ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಗ್ರಂಥಾಲಯ ಸ್ಥಾಪನೆಗೆ ಸರ್ಕಾರದ ಮುಂದೆ ಇರುವ ಕಾರ್ಯಗಳಾವುವು?

ಆ) ಈ ಬಗ್ಗೆ ಕಳೆದ ಎರಡು ವರ್ಷಗಳಲ್ಲಿ ಸಾಧಿಸಿದ ಪ್ರಗತಿ ಏನು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನಗಳಲ್ಲಿ ಗ್ರಂಥಾಲಯಗಳನ್ನು ಪ್ರಾರಂಭಿಸುವುದು ಮತ್ತು ಕಟ್ಟಡಗಳನ್ನು ಒದಗಿಸಿ ಅಭಿವೃದ್ಧಿ ಪಡಿಸುವುದು

ಆ) 1995-96ನೇ ಸಾಲಿನಲ್ಲಿ 100 ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗಿದೆ.

1996-97

1997-98ನೇ ಸಾಲಿನಲ್ಲಿ ಸ್ಟೇಟ್ ಸೆಕ್ಟರ್ ಯೋಜನೆ ಅಡಿಯಲ್ಲಿ 500 ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು ಪ್ರಾರಂಭಿಸುವ ಯೋಜನೆ ಇದೆ.

ತುಮಕೂರು ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ

2902 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕೈಗೊಂಡಿರುವ ಕುಡಿಯುವ ನೀರಿನ ಯೋಜನೆಗಳಾವುವು?

ಆ) ಕುಣಿಗಲ್ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಈ ಯೋಜನೆಯಡಿಯಲ್ಲಿ ಕೈಗೊಂಡಿರುವ ಗ್ರಾಮಗಳಾವುವು?